ದಿಃ 03.09.2019. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಆರ್ ಪಿ ವಕೀಲರಿಂದ,

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ಮಾಹಿತಿ ಇದೆ. ಎದುರುದಾರ ನಂಃ 1 ಅರ್ಜಿ ಸಲ್ಲಿಸಿ ಒ ಎಸ್ 65/1989 ರಲ್ಲಿಯ ತೀರ್ಪಿನಂತೆ ತಮ್ಮ ಪಾಲು ಕುರಿತು ಅಂತಿಮ ಡಿಕ್ರಿ ಪಡೆದಿರುತ್ತಾರೆ ಎಂದರೆ ಸರಿ . ತಮಗೆ ಬಂದ ಪಾಲನ್ನು 1 ನೇ ಎದುರುದಾರರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 3 ನೇ ಎದುರುದಾರರು ಮತ್ತು 4 ನೇ ಎದುರುದಾರರು ನನ್ನ ಸಹೋದರಿಯರು ಎಂದರೆ ಸರಿ . 3 ನೇ ಮತ್ತು 4 ನೇ ಎದುರುದಾರರು ಪ್ರಮಾಣ ಪತ್ರ ಸಲ್ಲಿಸಿ ಅರ್ಜಿದಾರರಿಂದ ತಲಾ ರೂ. 1,00,000/- ಪಡೆದು ತಮ್ಮ ಹಿಸ್ಸೆಯನ್ನು ಅರ್ಜಿದಾರರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ .

2 ನೇ ಎದುರುದಾರರು 2014 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಶ್ರೀ ಆನೆಪ್ಪ ನಿವೃತ್ತ ತಹಶೀಲ್ದಾರರು ಎಂದರೆ ಸರಿ . ನಮ್ಮ ತಂದೆ ತೀರಿಕೊಂಡ ನಂತರ ನಿವೃತ್ತಿ ವೇತನವನ್ನು ನನ್ನ ತಾಯಿ ಪಡೆಯುತ್ತಿದ್ದರು ಎಂದರೆ ಸರಿ . ನನ್ನ ತಾಯಿಗೆ ಬರುತ್ತಿದ್ದ ನಿವೃತ್ತಿ ವೇತನವನ್ನು ಅವರಿಗೆ ವಯಸ್ಸು ಆಗಿದ್ದ ಕಾರಣಕ್ಕೆ ನಾನು ಪಡೆಯಲು ನಾಮ ನಿರ್ದೇಶನವನ್ನು ನಮ್ಮ ತಾಯಿ ಮಾಡಿದ್ದರು ಎಂದರೆ ಸರಿ .ನಾನು ಪ್ರತಿ ತಿಂಗಳು ನನ್ನ ತಾಯಿಯ ನಿವೃತ್ತಿ ವೇತನ ಹಣವನ್ನು ಬ್ಯಾಂಕಿನಿಂದ ಪಡೆಯುತ್ತಿದ್ದೆ ಎಂದರೆ ಸಾಕ್ಷಿಯು ನನ್ನ ತಾಯಿಯ ಜೊತೆಗೆ ನಾನು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಮ್ಮ ತಾಯಿ ತೀರಿಕೊಳ್ಳುವಾಗ ಅವರಿಗೆ 85 ವರ್ಷ ವಯಸ್ಸು ಆಗಿತ್ತು . ನಮ್ಮ ತಾಯಿ ತೀರಿಕೊಳ್ಳುವ ಮೊದಲು ಹಾಸಿಗೆ ಹಿಡಿದಿರಲಿಲ್ಲ. ನನ್ನ ತಾಯಿಯ ನಿವೃತ್ತಿ ವೇತನವನ್ನು ನಾನು ನನ್ನ ಸ್ವಂತಕ್ಕೆ ಉಪಯೋಗಿಸುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತಾಯಿ ದಾವಣಗೆರೆಯಲ್ಲಿ

ನನ್ನ ಮನೆಯಲ್ಲಿ ವಾಸವಾಗಿದ್ದರು. ನಮ್ಮ ತಾಯಿ ಚೆನ್ನಗಿರಿಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿಯ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ .

ಈ ಹಂತದಲ್ಲಿ ಮುಂದಿನ ಪಾಟಿ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.

***(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ 03.09.2019 ರಂದು ಬೆರಳಚ್ಚು ಮಾಡಲಾಯಿತು)***

*ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,*
*ಭದ್ರಾವತಿ.*